**ಕರ್ನಾಟಕ ಸರ್ಕಾರ**

**(ಕೃಷಿ ಇಲಾಖೆ)**

ಸಂಖ್ಯೆ :ಉಕೃನಿ/ಕೃಭಾ/ ತಾಂ–1/ನಿಬಂಧನೆ/12/2014–15.

ಕೃಷಿ ಆಯುಕ್ತರ ಕಾರ್ಯಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು–01
ದಿನಾಂಕಃ 23–03–2015.

**<u>ಸುತ್ತೋಲೆ–12</u>**

ವಿಷಯ: 2014–15 ನೇ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಯಡಿ ನಿಗಧಿತ ನಮೂನೆಯ ಪಾಲಿಥೀನ್ ಹೊದಿಕೆ ಅಳವಡಿಕೆಗೆ ಸಂಬಂಧಿಸಿದಂತೆ ಸೂಚನೆಗಳು

ಉಲ್ಲೇಖ: ದಿನಾಂಕ: 16–03–2015 ರಂದು ಕೃಷಿ ಆಯುಕ್ತರ ಅಧ್ಯಕ್ಷತೆಯಲ್ಲಿ empanelled ಏಜೆನ್ಸಿಗಳೊಂದಿಗೆ ನಡೆದ ಸಭೆ,

***

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿನಾಂಕ: 16–03–2015 ರಂದು ಕೃಷಿ ಆಯುಕ್ತರ ಅಧ್ಯಕ್ಷತೆಯಲ್ಲಿ ಕೃಷಿ ಭಾಗ್ಯ ಯೋಜನೆಯು ನಿರೀಕ್ಷಿತ ಮಟ್ಟದಲ್ಲಿ ಪ್ರಗತಿಯಾಗದಿರುವ ಹಿನ್ನೆಲೆಯಲ್ಲಿ ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಕೃಷಿ ಹೊಂಡಗಳಿಗೆ ನಿಗಧಿತ ನಮೂನೆಯ (HDPE 300 micron Geo membrane ) ಪಾಲಿಥೀನ್ ಹೊದಿಕೆ ಅಳವಡಿಕೆಗೆ empanel ಮಾಡಲಾಗಿರುವ ಸಂಸ್ಥೆಗಳೊಂದಿಗೆ ಕ್ಷೇತ್ರ ಸಮಸ್ಯೆಗಳ ಬಗ್ಗೆ ಧೀರ್ಘವಾಗಿ ಚರ್ಚಿಸಿದ್ದು, ಕೆಳಕಂಡ ಅಂಶಗಳನ್ನು ಪಾಲಿಸಲು ಸೂಚಿಸಿದೆ.

- ಇಲಾಖೆಯ ಅಧಿಕಾರಿಗಳಿಂದ ಕೃಷಿ ಹೊಂಡ ನಿರ್ಮಾಣ ಪೂರ್ಣಗೊಂಡ ಫಲಾನುಭವಿಗಳ ಮಾಹಿತಿ ಪಡೆದ ನಂತರ, ಸಂಬಂಧಪಟ್ಟ ಸಂಸ್ಥೆಗಳವರು ಆ ಕ್ಷೇತ್ರದ ಇಲಾಖೆಯ ಅಧಿಕಾರಿಗಳ (ಕೃಷಿ ಅಧಿಕಾರಿ/ ಸಹಾಯಕ ಕೃಷಿ ಅಧಿಕಾರಿ) ಲಭ್ಯತೆಯ ಆಧಾರದ ಮೇಲೆ, ಸ್ಥಳ ಪರಿಶೀಲನೆಗೆ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಂಡು, ಅಧಿಕಾರಿಗಳಿಗೆ ಜಂಟಿ ಸಮೀಕ್ಷೆಯಲ್ಲಿ ಪಾಲ್ಗೊಳ್ಳಲು ಮಾಹಿತಿ ರವಾನಿಸುವುದು.

- ಪೂರ್ಣಗೊಂಡಿರುವ ಕೃಷಿ ಹೊಂಡಗಳಿಗೆ ಈ ಕೆಳಕಂಡಂತೆ ನಮೂನೆ ಸಿದ್ಧಪಡಿಸುವುದು.

| ಕ್ರ.ಸಂ | ರೈತರ ಹೆಸರು | ತಾಲ್ಲೂಕು/ ಹೋಬಳಿ/ ಗ್ರಾಮ | ದೂರವಾಣಿ ಸಂಖ್ಯೆ |
|---|---|---|---|
| | | | |
| | | | |
| | | | |
| | | | |

ಸಹಿ
(ಕೃಷಿ ಅಧಿಕಾರಿ/ ಸಹಾಯಕ ಕೃಷಿ ಅಧಿಕಾರಿ)

ಸಹಿ
(ಸಂಸ್ಥೆಯ ಅಧಿಕಾರಿ)

ಸಹಿ
ಸಹಾಯಕ ಕೃಷಿ ನಿರ್ದೇಶಕರು.
(..............................ತಾಲ್ಲೂಕು, ................................ಜಿಲ್ಲೆ)

P.T.O..

ಸಹಾಯಕ ಕೃಷಿ ನಿರ್ದೇಶಕರಿಂದ ಸಹಿ ಮಾಡಿಸಿದ ಈ ನಮೂನೆಯನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ಕಳುಹಿಸುವುದು.

- ಸಂಸ್ಥೆಗಳವರು ಹಾಗೂ ಇಲಾಖೆಯ ಅಧಿಕಾರಿಗಳು ವೇಳಾಪಟ್ಟಿಯನುಸಾರ ಕ್ಷೇತ್ರ ಭೇಟಿ ಮಾಡಿ, ಪರಿಶೀಲಿಸಿದ ಕೃಷಿ ಹೊಂಡಗಳಲ್ಲಿ ನಿಗದಿತ ತಾಂತ್ರಿಕತೆಯನುಸಾರ Slope, smoothening, Anchor trench formation and inlet/ outlet ಗಳನ್ನು ನಿರ್ಮಿಸಿರುವುದರ ಬಗ್ಗೆ ಖಾತ್ರಿಪಡಿಸಿಕೊಂಡು ಸ್ಥಳದಲ್ಲಿಯೇ ಇದ್ದು ಆ ಸ್ಥಳಕ್ಕೆ ಮತ್ತೊಮ್ಮೆ ಭೇಟಿ ನೀಡುವ ಸಂದರ್ಭಕ್ಕೆ ಅವಕಾಶ ನೀಡದೇ, ಕಾರ್ಯ ಪೂರ್ಣಗೊಳಿಸುವುದು.
- ಸಂಸ್ಥೆಯವರು ಕ್ಷೇತ್ರ ಭೇಟಿ ನೀಡುವ ಮೊದಲು ರೈತರಿಗೆ ಅವರ ಭೇಟಿಯ ಬಗ್ಗೆ ಖಚಿತಪಡಿಸುವುದರ ಜೊತೆಗೆ ರೈತರ ವಂತಿಕೆಯ ಹಣದ DD ತೆಗೆಸುವ ಬಗ್ಗೆ ಮಾಹಿತಿಯನ್ನು ನೀಡುವುದು.
- ಇಲಾಖೆಯಿಂದ ರೈತರ ವಂತಿಗೆಯ DD ಸಿದ್ಧವಿರುವ ಬಗ್ಗೆ ಪರಿಶೀಲಿಸುವುದು.
- ಮೇಲಿನ ನಮೂನೆಯನ್ನು ಸಂಸ್ಥೆಯವರಿಗೆ ಸಲ್ಲಿಸಿದ ದಿನದಿಂದ 5 ದಿನಗಳೊಳಗಾಗಿ ಸಂಸ್ಥೆಯವರು ಇಲಾಖೆಯಿಂದ ನಿಗಧಿಪಡಿಸಿದ ನಮೂನೆಯ ಪಾಲಿಥೀನ್ ಹೊದಿಕೆಯನ್ನು ಅಳವಡಿಸಬೇಕು.
- ಪಾಲಿಥೀನ್ ಹೊದಿಕೆಯನ್ನು ಸಂಸ್ಥೆಯವರು ಅಳವಡಿಸಿದ ನಂತರ ಕಾರ್ಯ ಪೂರ್ಣಗೊಂಡ ಬಗ್ಗೆ ಆ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರಿಗೆ ಪಟ್ಟಿಯನ್ನು ಸಲ್ಲಿಸುವುದು.
- ಈ ಪಟ್ಟಿಯನ್ನು ಪಡೆದ ದಿನದಿಂದ 7 ದಿನಗಳೊಳಗಾಗಿ ಸರ್ಕಾರದ ವಂತಿಗೆಯನ್ನು ಸಂಬಂಧಪಟ್ಟ ಸಂಸ್ಥೆಗಳ ಖಾತೆಗೆ ವರ್ಗಾಯಿಸಲು ಕ್ರಮ ಕೈಗೊಳ್ಳುವುದು.

**(ವಿ.ಸೂ: ಇಲಾಖೆಯ ಅಧಿಕಾರಿಗಳು ಹೆಚ್ಚು ಫಲಾನುಭವಿಗಳಿಗಾಗಿ ಕಾಯದೇ, ಕೃಷಿ ಹೊಂಡ ಕಾರ್ಯ ಪೂರ್ಣಗೊಳಿಸಿದ ಕೂಡಲೇ ಫಲಾನುಭವಿಗಳ ಮಾಹಿತಿ ಪಡೆದು ಕಾರ್ಯವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸುವುದು).**

**(ಕಂಡಿಕೆ 14 ರಲ್ಲಿ ಕೃಷಿ ಆಯುಕ್ತರು ಅನುಮೋದಿಸಿರುತ್ತಾರೆ)**

ಕೃಷಿ ಆಯುಕ್ತರ ಪರವಾಗಿ

ಇವರಿಗೆ:

1. ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು
   (ಕೃಷಿ ಭಾಗ್ಯ ಯೋಜನೆ ಅನುಷ್ಠಾನಗೊಳಿಸುತ್ತಿರುವ ಜಿಲ್ಲೆಗಳು)
2. ಸಂಬಂಧಪಟ್ಟ ಸಂಸ್ಥೆಗಳು